ಶ್ರೀ ಸತೀಶ್ ಜಾರಕಿಹೊಳಿ (ಜವಳಿ ರಾಜ್ಯ ಸಚಿವರು) :

ಅ) ೧೯೯೫-೯೬ರ ಕೈಮಗ್ಗ ಗಣತಿಯ ಪ್ರಕಾರ ಉಡುಪಿ ಜಿಲ್ಲೆಯಲ್ಲಿ ೧೭೧೩ ನೇಕಾರರು ಇರುತ್ತಾರೆ.

ಆ) ಹೌದು, ಉಡುಪಿ ಜಿಲ್ಲೆಯಲ್ಲಿರುವ ನೇಕಾರರ ಸಂಘಕ್ಕೆ ೨೦೦೪-೦೫ರ ಸಾಲಿನಲ್ಲಿ ರೂ.೩೧.೭೧ ಲಕ್ಷ ಸಹಾಯಧನ ನೀಡಲಾಗಿದೆ.

ಇ) ಪ್ರಸಕ್ತ ೨೦೦೫-೦೬ ನೇ ಸಾಲಿನಲ್ಲಿ ಆ ಜಿಲ್ಲೆಯ ಯೋಜನೆಗಳು ಇನ್ನೂ ಪರಿಶೀಲನೆಯಲ್ಲಿರುವುದರಿಂದ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಈ) ಹೌದು

ಉ) ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ ಅಲ್ಲದೆ ವಿಶೇಷವಾಗಿ ಇಲಾಖೆಯಿಂದ ಬೇರೆ ಯಾವುದೇ ಯೋಜನೆಗಳು ಇರುವುದಿಲ್ಲ. ವಿವರವನ್ನು ನೀಡುವುದು.

೩೮೭೭ (೪೫೭೧) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್‌ನಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಪಶುಸಂಗೋಪನಾ ವಿಶ್ವವಿದ್ಯಾಲಯ ಸ್ಥಾಪನೆಯ ಕಾರ್ಯ ಈಗ ಯಾವ ಹಂತದಲ್ಲಿದೆ; ಇದಕ್ಕೆ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ;

ಆ) ಇದಕ್ಕಾಗಿ ಇಲ್ಲಿಯವರೆವಿಗೆ ಖರ್ಚು ಮಾಡಿರುವ ಹಣವೆಷ್ಟು; ಸರ್ಕಾರದಿಂದ ನೀಡಿರುವ ಹಣವೆಷ್ಟು;

ಇ) ಯಾವ ಯಾವ ಬಾಬ್ತುಗಳಿಗಾಗಿ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; ಟಿ.ಎ.ಡಿ.ಎ ಗಳಿಗೆ ವೆಚ್ಚವಾಗಿರುವ ಹಣದ ಮೊತ್ತವೆಷ್ಟು ಪಡೆದುಕೊಂಡಿರುವವರ ಪೂರ್ಣ ವಿವರಗಳನ್ನು ಒದಗಿಸುವುದು;

ಈ) ಈ ವಿ.ವಿ.ಗೆ ಎಷ್ಟು ಸಿಬ್ಬಂದಿ ವರ್ಗದ ಅವಶ್ಯಕತೆ ಇರುತ್ತದೆ (ಸಿಬ್ಬಂದಿವಾರು ಮತ್ತು ದರ್ಜೆವಾರು ವಿವರಗಳನ್ನು ಒದಗಿಸುವುದು);

ಉ) ಇಲ್ಲಿಯವರೆವಿಗೆ ಯಾವ ಯಾವ ಸಿಬ್ಬಂದಿ ವರ್ಗವನ್ನು ಯಾವ ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ; (ನೇಮಕಾತಿ ಮಾಡಿಕೊಳ್ಳಲಾದ

ಸಿಬ್ಬಂದಿ ವರ್ಗದ ಹೆಸರು, ವಿಳಾಸ, ಹುದ್ದೆ ಮತ್ತು ವೇತನದ ವಿವರಗಳನ್ನು ಒದಗಿಸಲಾಗುವುದು;

ಊ) ಈ ವಿ.ವಿ ಉಪಕುಲಪತಿಗಳು ಬೆಂಗಳೂರಿನಲ್ಲಿ ಕಛೇರಿಯನ್ನು ಹೊಂದಿದ್ದು ಇದರಿಂದ ವಿವಿಧ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುತ್ತಿರುವುದರಿಂದ ಇವರ ಕಛೇರಿಯನ್ನು ವಿ.ವಿ ಯ ಕೇಂದ್ರ ಸ್ಥಾನವಾದ ಬೀದರ್‌ಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದೇ, ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕರ್ನಾಟಕ ಕಾಯ್ದೆ ಸಂಖ್ಯೆ : ೯/೨೦೦೪ ದಿನಾಂಕ: ೨೮-೨-೨೦೦೪ ರಂದು ಅಸ್ಥಿತ್ವಕ್ಕೆ ಬಂದಿದ್ದು ಕುಲಪತಿಗಳ ನೇಮಕಾತಿ ದಿನಾಂಕ : ೧-೯-೨೦೦೪ ರಂದು ಆಗಿದ್ದು ಅಂದಿನಿಂದ ಆರಂಭಗೊಂಡಿದೆ.

ಸದ್ಯಕ್ಕೆ ಪಶುವೈದ್ಯಕೀಯ ಕಾಲೇಜ್, ಬೀದರ್‌ನಲ್ಲಿ ಹಾಲಿ ಇದ್ದ ಕಟ್ಟಡಗಳನ್ನು ಉಪಯೋಗಿಸಿಕೊಂಡು ಕುಲಪತಿಗಳ ಕಛೇರಿ, ಕುಲಸಚಿವರ ಕಛೇರಿ, ಲೆಕ್ಕಪತ್ರ ನಿಯಂತ್ರಕರ ಕಛೇರಿ ಮತ್ತು ಇನ್ನಿತರೆ ಅಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸಲಾಗಿದೆ.

ಆ) ಈ ನೂತನ ವಿಶ್ವವಿದ್ಯಾಲಯಕ್ಕೆ ೨೦೦೪-೦೫ ನೇ ಸಾಲಿಗೆ ಯೋಜನಾ ಶೀರ್ಷಿಕೆಯಲ್ಲಿ ರೂ.೨೦೬.೭೫ ಲಕ್ಷಗಳನ್ನು ಬಿಡುಗಡೆಯಾಗಿರುತ್ತದೆ.

೨೦೦೫-೦೬ ನೇ ಸಾಲಿಗೆ ಯೋಚನೇತರ ಲೆಕ್ಕ ಶೀರ್ಷಿಕೆಯಲ್ಲಿ ೨೨೩.೧೯ ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ೨೦೦೫-೦೬ನೇ ಸಾಲಿಗೆ ಯೋಜನಾ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.೧೨೫ ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರದ ಆದೇಶ ಹೊರಡಿಸಲಾಗಿದೆ. ಇಲ್ಲಿಯ ವರೆಗೆ ಖರ್ಚು ಮಾಡಿರುವ ಹಣದ ವಿವರವನ್ನು ಅನುಬಂಧ-೧ರಲ್ಲಿ ವಿವರಿಸಲಾಗಿದೆ.

ಇ) ಪೂರ್ಣ ವಿವರಗಳನ್ನು ಇದರೊಂದಿಗೆ ಅನುಬಂಧ ೧ (Annexure-1) ರಲ್ಲಿ ವಿವರಿಸಲಾಗಿದೆ.

ಈ) ಈ ವಿಶ್ವವಿದ್ಯಾಲಯಕ್ಕೆ ೧೦೨ ಹುದ್ದೆಗಳ (ಅಧಿಕಾರಿಗಳು ಮತ್ತು ನೌಕರರು) ಅವಶ್ಯಕತೆ ಇರುತ್ತದೆ. ಇದರ ಬಗ್ಗೆ ಒಂದು ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಪೂರ್ಣ ವಿವರಗಳನ್ನು ಅನುಬಂಧ-೨ ರಲ್ಲಿ (Annexure-2) ಒದಗಿಸಲಾಗಿದೆ.

ಊ) ಈ ವಿಶ್ವವಿದ್ಯಾಲಯಕ್ಕೆ ಕೆಳಕಂಡ ಅಧಿಕಾರಿಗಳನ್ನು ಅವರ ಸೇವೆಯ ಸೀನಿಯಾರಿಟಿ ಪ್ರಕಾರ ಪ್ರಭಾರಿ ಆಧಾರದ ಮೇಲೆ ಕೆಲಸ ನಿರ್ವಹಿಸಲು ಆದೇಶ ಹೊರಡಿಸಲಾಗಿದೆ,

೧. ಡಾ॥ ಸುರೇಶ್ ಹೊನ್ನಪ್ಪಗೋಳ್, ಕುಲಸಚಿವರು, ಕವವಮೀವಿವಿ, ಬೀದರ್ – ರೂ.೧೬,೪೦೦/- ೨೨,೪೦೦/-.

೨. ಶ್ರೀ ಎಸ್.ಪುಷ್ಪರಾಜ್, ಲೆಕ್ಕಪತ್ರ ನಿಯಂತ್ರಕರು, ಕಪಪಮೀವಿವಿ, ಬೀದರ್ (ಇವರು ಕೃಷಿ ವಿಶ್ವ ವಿದ್ಯಾಲಯ,ಬೆಂಗಳೂರು ಇಲ್ಲಿಂದ ನಿಯೋಜನೆ ಆಧಾರದ ಮೇಲೆ ಕೆಲಸನಿರ್ವಹಿಸುತ್ತಿದ್ದಾರೆ.)

೩. ಡಾ॥ ಕೆ.ಎಸ್.ಗಂಗಾಧರ್,ವಿಸ್ತರಣಾ ನಿರ್ದೇಶಕರು, ಕಪಪಮೀವಿವಿ, ಬೀದರ್– ರೂ.೧೬,೪೦೦/- ೨೨,೪೦೦/-

೪. ಡಾ॥ ಐ ಕರುಣಾಸಾಗರ್, ಸಂಶೋಧನಾನಿರ್ದೇಶಕರು, ಕಪಪಮೀವಿವಿ, ಬೀದರ್–ರೂ.೧೬,೪೦೦/- ೨೨,೪೦೦/-

೫. ಡಾ.ಪಿ.ಎ.ಶಂಕರ್,ನಿರ್ದೇಶಕರು (ಸ್ನಾತಕೋತ್ತರ ಅಧ್ಯಯನ) ಕಪಪಮೀ ವಿ.ವಿ, ಬೀದರ್– ರೂ.೧೬,೪೦೦/- ೨೨,೪೦೦/-

ಊ) ಈ ವಿಶ್ವವಿದ್ಯಾಲಯದ ಕುಲಪತಿಗಳು ಕೇಂದ್ರ ಸ್ಥಾನವಾದ ಬೀದರ್ ಕಛೇರಿಯಿಂದಲೇ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ವ್ಯಾಪ್ತಿಯು ಬೀದರ್, ಬೆಂಗಳೂರು ಮಂಗಳೂರು ಇವುಗಳ ಜೊತೆಗೆ ರಾಜ್ಯದ

ಎಲ್ಲಾ ಭಾಗಗಳಿಗೂ ಹಬ್ಬಿರುವುದರಿಂದ ಕುಲಪತಿಗಳು ಎಲ್ಲಾ ಪ್ರದೇಶಗಳಿಗೂ ಕಾರ್ಯ ನಿಮಿತ್ತ ಭೇಟಿ ಮಾಡಬೇಕಾಗಿದೆ. ಬೆಂಗಳೂರಿನಲ್ಲಿರುವ ರಾಜ್ಯ ಸರ್ಕಾರ, ಕೃಷಿ ವಿಶ್ವವಿದ್ಯಾಲಯ, ಪಶುಪಾಲನಾ ಇಲಾಖೆ ಮತ್ತು ಘನವೆತ್ತ ರಾಜ್ಯಪಾಲರ ಕಛೇರಿಗಳ ಜೊತೆ ಸಂಪರ್ಕ ಹೊಂದಬೇಕಾಗಿರುವುದರಿಂದ ಬೆಂಗಳೂರಿನಲ್ಲಿ ಮತ್ತು ಮಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸುವುದು, ಸಿಬ್ಬಂದಿಗಳಿಗೆ ವೇತನ ಪಾವತಿ ಮಾಡುವುದು ಇತ್ಯಾದಿ ಇದಕ್ಕಾಗಿ ಬೆಂಗಳೂರು ಮತ್ತು ಮಂಗಳೂರಿನಲ್ಲಿ ತಲಾ ಒಂದು ಪ್ರಾದೇಶಿಕ ಕಛೇರಿಯನ್ನು ತೆರಯಲು ಕ್ರಮತೆಗೆದುಕೊಳ್ಳಲಾಗಿದೆ.

೩೮೭೮ (ಳಜಿಒ) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ :- ಮಾನ್ಯ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೆ.ಎಸ್.ಐ.ಐ.ಡಿ.ಸಿ.ಯಿಂದ ಸಾಲ ಪಡೆದು ಸ್ಥಾಪಿಸಿರುವ ಉದ್ಯಮಗಳ ಸಂಖ್ಯೆ ಎಷ್ಟು (ಉದ್ಯಮಗಳ ಹೆಸರು ಮತ್ತು ಪಡೆದಿರುವ ಸಾಲದ ವಿವರ ಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು;

ಆ) ಈ ಪೈಕಿ ಎಷ್ಟು ಉದ್ಯಮಗಳು ಲಾಭದಲ್ಲಿವೆ ಹಾಗೂ ಎಷ್ಟು ಉದ್ಯಮಗಳು ನಷ್ಟದಲ್ಲಿವೆ. ಈ ಉದ್ಯಮಗಳ ಹೆಸರು ಹಾಗೂ ಇವುಗಳ ಲಾಭ ಎಷ್ಟು;

ಇ) ನಷ್ಟದ ಪ್ರಮಾಣವನ್ನು ಜಿಲ್ಲಾವಾರು ಅಂಕಿ ಅಂಶದಲ್ಲಿ ಒದಗಿಸುವುದು;

ಈ) ನಷ್ಟದಲ್ಲಿರುವ ಉದ್ಯಮಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ, ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು)

ಅ) ಕರ್ನಾಟಕ ರಾಜ್ಯ ಕೈಗಾರಿಕ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ಪ್ರಾರಂಭದಿಂದ ೩೧-೩-೦೫ ರವರೆಗೆ ಈ ಕೆಳಗೆ ಸೂಚಿಸಿರುವಂತೆ (ಅವಧಿ ಸಾಲ, ಕಾರ್ಪೋರೇಟ್ ಸಾಲ ನೋಡಿ ನೀಡಿದ ಬಿಲ್ಲೆಗಳು, ಲೀಸ್ ಫೈನಾನ್ಸ್ ಬಂಡವಾಳ ಸಹಾಯ ಇತ್ಯಾದಿ ಸಾಲಗಳನ್ನು ಮಂಜೂರಾತಿ ಮಾಡಿರುತ್ತದೆ.